Publication : Samyuktha Karnataka
Date: June 20, 2014
Page No: 3
Edition: All

SARA Media Net
Simply communicate...

ಸುಧಾಕರ ಬನ್ನಂಜ.

# ಆಹಾ.. ನಿರುತ್ತರ.. ನಿರುತ್ತರ..

ಈ ಸೃಷ್ಟಿಯಲ್ಲಿ ಅದೆಷ್ಟೋ ನಿರುತ್ತರ ಸಂಗತಿಗಳಿವೆ. ಅದೇ ರೀತಿ ಸಾಮಾಜಿಕ ಬದುಕಿನಲ್ಲಿಯೂ ಅನೇಕ ಪ್ರಶ್ನೆಗಳಿಗೆ ಸಿಗುವುದು ನಿರುತ್ತರ.. ಸದ್ಯದ ಪರಿಸ್ಥಿತಿಯಲ್ಲಿ ಗಿರೀಶ್ ಕಾಸರವಳ್ಳಿಯವರ ಪುತ್ರ ಅಪೂರ್ವ ಕಾಸರವಳ್ಳಿ ನಿರ್ದೇಶಿಸುತ್ತಿರುವ ಚಿತ್ರದ ಹೆಸರೂ ನಿರುತ್ತರ..!

ಗಿರೀಶ್ ಕಾಸರವಳ್ಳಿ ಅವರು ಕಲಾತ್ಮಕ ಚಿತ್ರಗಳಿಗೆ ಹೆಸರಾದವರು. ಅನೇಕ ಪ್ರಶಸ್ತಿಗಳ ಮೂಲಕ ಕನ್ನಡ ಚಿತ್ರರಂಗಕ್ಕೆ ಹೊಸ ಮೆರುಗನ್ನು ನೀಡಿದವರು. ಅವರ ಪುತ್ರ ನಿರ್ದೇಶಿಸುವ ಚಿತ್ರ ಕೂಡ ಅದೇ ರೀತಿಯದು ಎಂದುಕೊಂಡರೆ, ಅದು ತಪ್ಪು ಕಲ್ಪನೆ. ಅಪೂರ್ವ ನಿರ್ದೇಶನ ಮಾಡುತ್ತಿರುವ ಚಿತ್ರ ಪಕ್ಕಾ ಕಮರ್ಷಿಯಲ್. ಆದರೆ ಸಾಹಸ ದೃಶ್ಯಗಳಿಂದ ಚಿತ್ರ ಹೊರಗಿರಬಹುದು ಅಷ್ಟೇ. ಚಿತ್ರದ ಮುಹೂರ್ತದ ಬಳಿಕ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಚಿತ್ರದ ಕಥೆಯ ಬಗ್ಗೆ ಹೆಚ್ಚಿನ ವಿವರಗಳು ಬಿಚ್ಚಿಕೊಳ್ಳಲಿಲ್ಲ. ಆದರೆ ಚಿತ್ರದ ತಾಂತ್ರಿಕ ವಿಷಯಗಳ ಬಗ್ಗೆ ಚಿತ್ರತಂಡ ಹೆಮ್ಮೆಯಿಂದಲೇ ಹೇಳಿಕೊಂಡಿತು. ಅಂದ ಹಾಗೆ ಈ ಚಿತ್ರದ ನಿರ್ಮಾಪಕರು ಅರವಿಂದ್ ರಾಮಣ್ಣ. ಇವರು ನಟಿ ಭಾವನಾ ಅವರ ಸಹೋದರ. ಭಾವನಾ ಕೂಡ ಪ್ರಮುಖ ಪಾತ್ರದಲ್ಲಿ ನಟಿಸುತ್ತಿರುವುದಷ್ಟೇ ಅಲ್ಲ; ಸಹೋದರನ ಜೊತೆ ನಿರ್ಮಾಣದಲ್ಲೂ ಕೈ ಜೋಡಿಸಿದ್ದಾರೆ.

ಹಾಗೆ ಸುಮ್ಮನೆ ಎಂಬ ಚಿತ್ರದಲ್ಲಿ ನಟಿಸಿದ್ದ ನಾಯಕ ನಟ ಕಿರಣ್, ಐಂದ್ರಿತಾ ರೈ, ಹಾಗೂ ಬಾಲಿವುಡ್‌ನ ರಾಹುಲ್‌ಬೋಸ್ ಮುಖ್ಯ ಪಾತ್ರದಲ್ಲಿ ಇದ್ದಾರೆ. ಮುಖ್ಯವಾಗಿ ನಾಲ್ಕು ಪಾತ್ರಗಳ ಸುತ್ತಾ ಚಿತ್ರವು ಸುತ್ತುತ್ತದೆ. ವಿಶೇಷವೆಂದರೆ, 'ಸ್ಲಂ ಡಾಗ್ ಮಿಲೇನಿಯರ್' ಚಿತ್ರಕ್ಕೆ ಆಸ್ಕರ್ ಪಡೆದ ರಸೂಲ್ ಪೂಕುಟ್ಟಿ ಸೌಂಡ್ ಎಂಜಿನಿಯರ್ ಆಗಿರುವುದು. ಅದೇ ರೀತಿ ಹೆಸರಾಂತ ಸಿತಾರ್ ವಾದಕ ನಿಲಾದ್ರಿ ಕುಮಾರ್ ಸಂಗೀತ ಸಂಯೋಜನೆ ಮಾಡುತ್ತಿರುವುದು.

ನಿರುತ್ತರ ಸಂಬಂಧಗಳ ಸುತ್ತಲೂ ಸುತ್ತುವ ಕಥೆ. ಇದರಲ್ಲಿ ಮಸಾಲಾ ವಿಷಯಗಳು ಇರುತ್ತವೆ ಎಂದರು ಅಪೂರ್ವ. ನಾನಿನ್ನು ಸಿನಿಮಾ ವಿದ್ಯಾರ್ಥಿ. ಆದರೆ ಮನೆಯಲ್ಲಿ ಪೆಂಟಾಸ್ಟಿಕ್ ಡೈರೆಕ್ಟರ್ ಇದ್ದಾರೆ. ಅವರ ಸಲಹೆ ಇದ್ದೇ ಇರುತ್ತದೆ ಎಂದರು.

ಹಿಮಾಚಲ ಪ್ರದೇಶ, ರಾಜಾಸ್ಥಾನ ಹಾಗೂ ಗೋವಾದಲ್ಲಿ 50 ದಿನಗಳ ಶೂಟಿಂಗ್ ಶೆಡ್ಯೂಲ್ ಇರುತ್ತದೆ ಎಂಬ ವಿವರ ಕೂಡ ಲಭ್ಯವಾಯಿತು. ಮುಂಬೈನಲ್ಲಿ ವಾಸವಿದ್ದು ಹಿಂದಿ ಧಾರಾವಾಹಿಗಳಲ್ಲಿ ಅಭಿನಯಿಸಿಕೊಂಡಿದ್ದ ಕಿರಣ್‌ಗೆ ಈಗ ಕನ್ನಡದಲ್ಲಿ ಅಭಿನಯಿಸುತ್ತಿರುವುದು ಖುಷಿ ಕೊಟ್ಟಿದೆ. ಈ ಪಾತ್ರಕ್ಕಾಗಿ ನಾನು ಸಾಕಷ್ಟು ಕುತೂಹಲಭರಿತನಾಗಿದ್ದೇನೆ. ಏಕೆಂದರೆ ನಾನೊಬ್ಬ ನಟನಾಗಬೇಕೆಂದು ಇಲ್ಲಿಗೆ ಬರಲಿಲ್ಲ. ಒಬ್ಬ ಕಲಾವಿದನಾಗುವ ಆಸೆಯಿಂದ ಬಂದಿರುವೆ ಎಂದರು ಕಿರಣ್. ಸಂಗೀತ ನಿರ್ದೇಶಕ ನಿಲಾದ್ರಿ ಕುಮಾರ್ ಅವರಿಂದ ಚಿತ್ರದಲ್ಲಿ ಏಳು ಹಾಡುಗಳು ಇವೆ ಎಂಬ ಮಾಹಿತಿ ಹೊರಬಿತ್ತು. ಛಾಯಾಗ್ರಾಹಕ ರಾಮಚಂದ್ರ ಎಂದಿನಂತೆ ಹೆಚ್ಚು ಮಾತನಾಡಲಿಲ್ಲ. ಇದು ಹೊಸ ಸಂವೇದನೆಯ ಕಥೆ ಎಂದರು ಗಿರೀಶ್ ಕಾಸರವಳ್ಳಿ.

